# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ: ತುವಿ/ಸಂ.ವಿ:/2024-25/1094 ದಿನಾಂಕ: 09.12.2024

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡವು ನಡೆಸಲಿರುವ "ಸಂಶೋಧನಾ ವಿಧಾನ" (Research Methodology) ತರಭೇತಿಯಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡ ಇವರ ಪತ್ರ ಸಂಖ್ಯೆ:ಕರಾಉಶಿಅಧಾ/ಸಂಶೋಧನಾ ವಿಧಾನ-3/2024-25/2401 ದಿನಾಂಕ: 02.12.2024.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡವು ದಿನಾಂಕ:23.12.2024 ರಿಂದ ದಿನಾಂಕ:29.12.2024 ರವರೆಗೆ ಪಿಹೆಚ್.ಡಿ ಪದವಿಗೆ ನೋಂದಾಯಿಸಿಕೊಂಡ ಸಮಾಜ ವಿಜ್ಞಾನ (Social Science) ನಿಕಾಯದ ಸಂಶೋಧನಾ ವಿದ್ಯಾರ್ಥಿಗಳಿಗೆ "ಸಂಶೋಧನಾ ವಿಧಾನ" (Research Methodology) ಕುರಿತು 07 ದಿನಗಳ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು, ಅರೆಕಾಲಿಕ ಹಾಗೂ ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದು. ರಾಜ್ಯದ ಹಾಗೂ ದೇಶದ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಚಟುವಟಿಕೆ ಆಧಾರಿತ ತರಬೇತಿಯನ್ನು ನೀಡಲಾಗುವುದು. ಒಂದು ಬ್ಯಾಚ್‌ನಲ್ಲಿ 40 ಜನ ಶಿಬಿರಾರ್ಥಿಗಳಿಗೆ ಭಾಗವಹಿಸಲು ಅವಕಾಶವಿರುತ್ತದೆ.

ತರಬೇತಿಗೆ ಆಯ್ಕೆಯಾದ ಶಿಬಿರಾರ್ಥಿಗಳಿಗೆ ಓಓಡಿ ಸೌಲಭ್ಯವಿರುತ್ತದೆ. ಸದರಿ ಅಕಾಡೆಮಿಯಲ್ಲಿ ಅಭ್ಯರ್ಥಿಗಳಿಗೆ 07 ದಿನಗಳ ಕಾಲ ಉಚಿತ ಊಟದ ವ್ಯವಸ್ಥೆಯು ಲಭ್ಯವಿರುತ್ತದೆ ಮತ್ತು ಮಧ್ಯದಲ್ಲಿ ರಜೆಯ ಸೌಲಭ್ಯವಿರುವುದಿಲ್ಲ ಹಾಗೂ ಕಡ್ಡಾಯವಾಗಿ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ವಸತಿ ಇರುವುದು.

ಈ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್.ಡಿ ಸಂಶೋಧಕರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡವು ನಡೆಸಲಿರುವ "ಸಂಶೋಧನಾ ವಿಧಾನ" (Research Methodology) ತರಭೇತಿಯಲ್ಲಿ ಭಾಗವಹಿಸಿ ತರಬೇತಿಯ ಸದುಪಯೋಗ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಯೋಜಕರಾದ ಡಾ. ಮಲ್ಲಿಕಾರ್ಜುನ ಎನ್. ಮೂಲಿಮನಿ, ಮೊಬೈಲ್ ಸಂಖ್ಯೆ: 9901871972 ಇವರನ್ನು ಸಂಪರ್ಕಿಸುವುದು.

ವಿಶೇಷ ಸೂಚನೆ: "ಸಂಶೋಧನಾ ವಿಧಾನ" (Research Methodology) ತರಭೇತಿಯಲ್ಲಿ ಭಾಗವಹಿಸುವವರು https://forms.gle/EgZhHS35bYKNu7iR7 GoogleForm ನಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು.

ನಿರ್ದೇಶಕರು-ಸಂಶೋಧನೆ (ಪ್ರ)
ನಿರ್ದೇಶಕರು - ಸಂಶೋಧನೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಇವರಿಗೆ,

1. ಕಲಾ ನಿಕಾಯದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.(ತಮ್ಮ ವಿಭಾಗದಲ್ಲಿನ ಸಂಶೋಧನಾರ್ಥಿಗಳು ಸದರಿ ತರಬೇತಿಯಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು)
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು)

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕುಲಸಚಿವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.